**ದಿನಾಂಕಃ 07.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಸಿ.ಆರ್. ಅವರಿಂದ–

7. ನನ್ನ ವಾದ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿವೆ. ಈ ದಾವೆಯನ್ನು ನಮಗೆ ದಾವ ಸ್ವತ್ತುಗಳಲ್ಲಿ ಅರ್ಧ ಭಾಗ ಬರಬೇಕು ಎಂದು ಹಾಕಿದ್ದೇವೆ. ನನ್ನ ತಾತ 1 ನೇ ಪ್ರತಿವಾದಿ ಗಂಗಾಧರಚಾರ್ ಅವರ ತಂದೆ ಹೆಸರು ದಾಸಚಾರ್ ಉರುಫ್ ಭೈರಾಚಾರ್. ಸದರಿ ದಾಸಚಾರ್ ಅವರಿಗೆ 3 ಜನ ಮಕ್ಕಳು. ನನ್ನ ತಾತ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿ.

8. ದಾವ ಸ್ವತ್ತಿನ ಸರ್ವೇ ನಂ.45. ದಾವ ಸ್ವತ್ತು ಸರಕಾರದಿಂದ ನಮ್ಮ ಮುತ್ತಜ್ಜಿ ಪುಟ್ಟಮ್ಮ ಅವರಿಗೆ 1990 ರಲ್ಲಿ ಬಂದಿತ್ತು. ನಮ್ಮ ಮುತ್ತಜ್ಜಿಗೆ 1990 ರಲ್ಲಿ ಸರಕಾರದಿಂದ ದಾವ ಸ್ವತ್ತು ಮಂಜೂರಾಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಈ ದಾವದಲ್ಲಿ ದಾವ ಸ್ವತ್ತು ನಮ್ಮ ಮುತ್ತಜ್ಜಿಗೆ ಮಂಜೂರಾಗಿತ್ತು ಎಂದು ಬರೆಯಿಸಿ ಹಾಕಿದ್ದೇವೆ. ವಾದಪತ್ರವನ್ನು ಸಾಕ್ಷಿಗೆ ತೋರಿಸಿ ಎಲ್ಲಿ ಬರೆದಿದೆ ಹೇಳಿ ಎಂದು ಕೇಳಿದಾಗ ವಾದಪತ್ರದಲ್ಲಿ ಇಲ್ಲ ಎಂದು ನುಡಿಯುತ್ತಾರೆ.

9. ವಾದಪತ್ರದ 4 ನೇ ಖಂಡಿಕೆಯಲ್ಲಿ ದಾವ ಸ್ವತ್ತು ದಾಸಚಾರಿ ಉರುಫ್ ಭೈರಾಚಾರಿ ಅವರಿಗೆ ಕರ್ನಾಟಕ ಸರಕಾರದಿಂದ ಖಾಯಂ ಸಾಗುವಳಿ ಚೀಟಿ ಮೂಲಕ ಬಂದಿತ್ತು ಎಂದು ನಮೂದಿಸಿದ್ದು ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆ ಹಾಜರುಪಡಿಸಲು ಸಾಧ್ಯವಿಲ್ಲ. ನನಗೆ ದಾವ ಸ್ವತ್ತಿನ ಬಗ್ಗೆಯಾಗಲಿ ಅಥವ ದಾವ ಸ್ವತ್ತಿನ ದಾಖಲೆಗಳ ಬಗ್ಗೆಯಾಗಲಿ ತಿಳಿಯದೆ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಾದ ನಾವುಗಳು, ನನ್ನ ತಾತ–ಅಜ್ಜಿ ಒಟ್ಟಿಗೆ ವಾಸಿಸುತ್ತಿಲ್ಲ, ನಮ್ಮ ಹಾಗೂ ಪ್ರತಿವಾದಿಗಳ ನಡುವೆ ಈ ದಾವೆ ಹಾಕಿದ ಸಮಯದಿಂದ ವಿಶ್ವಾಸ ಇಲ್ಲ.

10. 1ನೇ ವಾದಿ ನನ್ನ ತಂದೆ ಮರಗೆಲಸ ಹಾಗೂ ವ್ಯವಸಾಯ ಮಾಡುತ್ತಾರೆ. ನನ್ನ ತಂದೆ ಆರೋಗ್ಯವಾಗಿ ಓಡಾಡಿಕೊಂಡಿದ್ದಾರೆ ಎಂದರೆ ಸರಿ. ಇತರೆ ವಾದಿಯರು ನನ್ನ ತಂದೆ ಹಾಗೂ ತಂಗಿಯರಾಗಿದ್ದು, ಅವರುಗಳ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಬಹುದಲ್ಲ ಎಂದರೆ ಅವರು ಕೆಲಸಕ್ಕೆ ಹೋಗುತ್ತಾರೆ. ದಾವ ಸ್ವತ್ತಿನ ಸ್ಥಿತಿ-ಗತಿ ಬಗ್ಗೆ ನನಗಿಂತ ನನ್ನ ತಂದೆಗೆ ಚೆನ್ನಾಗಿ ಗೊತ್ತು ಎಂದರೆ ಸರಿ.

11. ನಿಪಿ.8ರ ದಾಖಲೆಯ 3ನೇ ಪುಟದಲ್ಲಿರುವ ರವಿ ಎಂಬ ಸಹಿ ನನ್ನ ತಂದೆಯದಾಗಿರುವುದಿಲ್ಲ. ನಿಡಿ.1ರ ಪುಟ ಸಂಖ್ಯೆ 1 ರಿಂದ 6ರಲ್ಲಿರುವ ರವಿ ಎಂಬ ಸಹಿ ಕೂಡ ನನ್ನ ತಂದೆಯದಾಗಿರುವುದಿಲ್ಲ. ಈಗ ನನಗೆ ತೋರಿಸಿದ ವಕಾಲತ್ ನಾಮೆ ಮೇಲಿರುವ ಸಹಿ ನನ್ನ ತಂದೆಯದೆ ಆಗಿದೆ. ನಿಪಿ.8, ನಿಡಿ.1 ಹಾಗೂ ವಕಾಲತ್ ನಾಮೆಯಲ್ಲಿರುವ ನನಗೆ ತೋರಿಸಿದ ಸಹಿಗಳು ನನ್ನ ತಂದೆಯದೆ ಆಗಿವೆ ಎಂದರೆ ಸರಿಯಲ್ಲ, ವಕಾಲತ್ ನಾಮೆಯಲ್ಲಿರುವ ಸಹಿ ಮಾತ್ರ ನನ್ನ ತಂದೆಯದೆ ಆಗಿದೆ.

12. ನಿಪಿ.12ರ ಕೊನೆಯ ಪಹಣಿ ಪ್ರತಿವಾದಿ 1,3 ಹಾಗೂ 5ರವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ದಿಃ 25.10.2018ರಂದು ನನ್ನ ತಂದೆಯಾದ 1ನೇ ವಾದಿ ಹಾಗೂ ಪ್ರತಿವಾದಿ 1 ರಿಂದ 8ರವರು ದಾವ ಸ್ವತ್ತನ್ನು ರೂ.19,80,000/-ಗಳಿಗೆ 9ನೇ ಪ್ರತಿವಾದಿಗೆ ನಿಡಿ.1ರಂತೆ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು.

13. ಕ್ರಯ ಕರಾರು ಹಣ ರೂ.19,80,000/-ಗಳ ಪೈಕಿ ರೂ. 1,20,000/-ಗಳನ್ನು ಮುಂಗಡವಾಗಿ ನಗದಾಗಿ ಪಡೆದುಕೊಂಡು ಉಳಿಕೆ ಬಾಬ್ತು ರೂ.18,60,000/-ಗಳನ್ನು ದಾವ ಷೆಡ್ಯೂಲ್ ಸ್ವತ್ತನ್ನು ದುರಸ್ತು ಮಾಡಿಸಿ, ಸಂಬಂಧಪಟ್ಟ ಇಲಾಖೆಯಿಂದ ಮಾರಾಟದ NOC ಪಡೆದುಕೊಂಡು, 6 ತಿಂಗಳ ಒಳಗೆ ಮೂಲ ದಾಖಲೆಗಳನ್ನು ಹೊಂದಿಸಿಕೊಂಡು ಬಂದು, 9ನೇ ಪ್ರತಿವಾದಿ ಹೆಸರಿಗೆ ಶುದ್ಧ ಕ್ರಯ ಪತ್ರ ಬರೆದುಕೊಡುವುದಾಗಿ ಒಪ್ಪಿ ನಿಡಿ.1ರ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸುಳ್ಳು. ಸದರಿ 6 ತಿಂಗಳ ಅವಧಿ ಮುಗಿದರು ಕೂಡ ನನ್ನ ತಂದೆ ಹಾಗೂ ಇತರೆ ಪ್ರತಿವಾದಿಗಳು

9 ನೇ ಪ್ರತಿವಾದಿ ಹೆಸರಿಗೆ ಶುದ್ಧ ಕ್ರಯ ಪತ್ರ ಬರೆದುಕೊಡಿ ಎಂದು ಕೇಳಿದಾಗ ದಾವ ಸ್ವತ್ತನ್ನು ದುರಸ್ತು ಪಡಿಸಲು ಆಗಿಲ್ಲ, ದಾಖಲೆಗಳನ್ನು ಪಡೆದುಕೊಳ್ಳಲು ಆಗಿಲ್ಲ 3 ತಿಂಗಳ ಕಾಲಾವಕಾಶ ಕೊಡಿ ಎಂದು ಪುನಃ ರೂ.60,000/- ಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

14. ಪ್ರತಿವಾದಿ 1 ರಿಂದ 8 ರವರು ನಿಡಿ.1 ರ ಕರಾರು ಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದಾರೆ ಅದರ ವಿಚಾರ ನನಗೆ ತಿಳಿದಿದ್ದರು ಸದರಿ ದಾಖಲೆ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ರವಿ ನ್ಯಾಯಾಲಯಕ್ಕೆ ಬಂದರೆ ಎಲ್ಲ ವಿಚಾರಗಳು ತಿಳಿಯುತ್ತವೆ ಎಂದು ದುರುದ್ದೇಶದಿಂದ ನನ್ನ ಮೂಲಕ ಸಾಕ್ಷಿ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ.

15. ದಾವ ಸ್ವತ್ತಿನ ಚೆಕ್ಕುಬಂದಿ ಪೂ- ಬಸವೇಶ್ವರ ದೇವಸ್ಥಾನ, ಪ-ಚಿಕ್ಕೊಳಮ್ಮ ಅವರ ಜಮೀನು, ಉ-ನಿಂಗೇಗೌಡರ ಜಮೀನು ಹಾಗೂ ದ- ಮಾಲಿಂಗೇಗೌಡರ ಜಮೀನು ಇರುತ್ತದೆ. ವಾದಪತ್ರದಲ್ಲಿ ಇದೇ ಚೆಕ್ಕುಬಂದಿ ಬರೆಯಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿದು ಪುನಃ ಬರೆಯಿಸಿದ್ದೇವೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.